ಯಾವಾಗಲೂ ಕೂಡ, ಅಂದರೆ ಅಲ್ಲಿ ಯಾವುದೇ ಸರ್ಕಾರ ಇರಲಿ, ಈಗ ಇರುವ ಜಯಲಲಿತ ಸರ್ಕಾರ ಆಗಲಿ ಅಥವಾ ಈ ಹಿಂದೆ ಇದ್ದಂಥ ಡಿಎಂಕೆ ಸರ್ಕಾರ ಇರಲಿ, ಇವರ ಪ್ರಯತ್ನ ಏನೆಂದರೆ, ಒಂದೆರಡು ತಿಂಗಳ ನಂತರ ನೀರು ಬೇಕಾಗುತ್ತದೆಂದರೆ ಮೊದಲೇ ನೀರು ಬಿಡಿ ಎಂದು ಪ್ರಯತ್ನ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಈಗ ಅವರು ಹೇಳಿಯೇ 15 ದಿವಸ ಆಗಿದೆ. ಅವರು ಯಾವಾಗಲೂ ಕೂಡ ಒಂದು ರೀತಿಯ ಪ್ರೆಷರ್ ಪ್ರಾಕ್ಟಿಸ್ ಮಾಡುತ್ತಿದ್ದಾರೆ. ನಾವು ಈಗಾಗಲೇ ಹೇಳಿದ ಹಾಗೆ ಕಾವೇರಿ ಅಥಾರಿಟಿ ಮೀಟಿಂಗ್ ಕರೆಯತಕ್ಕಂಥ ಅವಶ್ಯಕತೆ ಇಲ್ಲ ಮತ್ತು ಪ್ರಾಧಿಕಾರದ ಸಭೆ ಸೇರತಕ್ಕಂಥ ಅವಶ್ಯಕತೆ ಇಲ್ಲ. ಹಾಗೆಯೇ ಈಗ ನೀರು ಬಿಡತಕ್ಕಂಥ ಪ್ರಶ್ನೆಯೇ ಈ ಸಂದರ್ಭದಲ್ಲಿ ಉದ್ಭವಿಸುವುದಿಲ್ಲ ಎಂದು ನಾವು ಈಗಾಗಲೇ ಸ್ಪಷ್ಟಪಡಿಸಿದ್ದೇವೆ. ಮತ್ತೆ ಇವತ್ತೂ ಕೂಡ ಇದನ್ನು ಸಹ ಸ್ಪಷ್ಟಪಡಿಸುತ್ತೇವೆ. ನಮ್ಮ ರಾಜ್ಯದ ರೈತರ ಹಿತವನ್ನು ಕಾಪಾಡಿಕೊಂಡು ಮುಂದಿನ ಕ್ರಮವನ್ನು ಮಾಡುವುದಕ್ಕೆ ಆಗುತ್ತದೆ ಹೊರತಾಗಿ, ನಮ್ಮ ರೈತರ ಹಿತವನ್ನು ಬದಿಗಿಟ್ಟು, ಬಲಿಕೊಟ್ಟು ಯಾವ ಕೆಲಸವನ್ನೂ ಕೂಡ ಮಾಡುವುದಕ್ಕೆ ಆಗುವುದಿಲ್ಲ. ಮತ್ತೆ ನ್ಯಾಯ ಮಂಡಳಿಯದು ನಮ್ಮ ಕೈಯಲ್ಲಿ ಇಲ್ಲ. ತಮಗೆ ಗೊತ್ತಿರುವ ಹಾಗೆ ಟ್ರಿಬ್ಯುನಲ್ ಲಾ ಪ್ರಕಾರ ಜಡ್ಜ್‌ಸ್‌ರವರು ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತಾರೆ ಎನ್ನತಕ್ಕಂಥ ಸ್ವಾತಂತ್ರ್ಯ ಅವರಿಗೆ ಇರತಕ್ಕಂಥದು. ಇಷ್ಟತ್ತೆ ಕೊಡಿ ಎಂದು ನಾವು ಹೇಳುವುದಕ್ಕೆ ಆಗುವುದಿಲ್ಲ. ಮತ್ತೆ ಇದರ ಹಿಯರಿಂಗ್ ಈಗಾಗಲೇ ನಡೆದಿದೆ. ಹಾಗೆಯೇ ಅನಿಲ್ ದಿವಾನ್‌ರವರ ಆರ್ಗ್ಯುಮೆಂಟ್ ಕೂಡ ಈಗಾಗಲೇ ನಡೆದಿರತಕ್ಕಂಥದು ತಮಗೆಲ್ಲಾ ಗೊತ್ತಿದೆ. ಮತ್ತೆ ಇವತ್ತು ಕೂಡ ಚೆನ್ನಾಗಿ ಆರ್ಗ್ಯುಮೆಂಟ್ ಮಾಡಿದ್ದಾರೆ. ಹಾಗೆಯೇ ನಮ್ಮ ನಾರಿಮನ್‌ರವರೂ ಕೂಡ ಆರ್ಗ್ಯುಮೆಂಟ್ ಮಾಡಿ ಮುಗಿಸಿದ್ದಾರೆ. ಇದೆಲ್ಲಾ ಆದ ಮೇಲೆ ಅವರು ಯಾವ ಸಂದರ್ಭದಲ್ಲಿ ತೀರ್ಪು ಕೊಡುತ್ತಾರೆ ಎನ್ನತಕ್ಕಂಥದ್ದನ್ನು ನೋಡೋಣ.

ಉಪಾಧ್ಯಕ್ಷರು:– ಈಗ ಪ್ರಶ್ನೋತ್ತರ ವೇಳೆ. ಮೊದಲ ಪ್ರಶ್ನೆ ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರು.

ಶ್ರೀ ಸಿ.ಟಿ.ರವಿ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು...

ಉಪಾಧ್ಯಕ್ಷರು:– ಈಗ ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿದೆ ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಕಟ್ಟಾಸುಬ್ರಮಣ್ಯ ನಾಯ್ಡುರವರೆ ತಾವು ಪ್ರಶ್ನೆ ಕೇಳಿ.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಅವರ ಗಮನಕ್ಕೆ ತೆಗೆದುಕೊಂಡು ಬನ್ನಿ ಎಂದು ಈಗಾಗಲೇ ಹೇಳಿದ್ದರು. ನಾನು 10 ದಿವಸಗಳ ಕಾಲ ಪಾದಯಾತ್ರೆ ಮಾಡಿಕೊಂಡು ಬಂದು

ಅಲ್ಲಿರತಕ್ಕಂಥ ಸಮಸ್ಯೆಗಳನ್ನು ಮಾನ್ಯ ಮುಖ್ಯಮಂತ್ರಿಯವರ ಮುಂದಿಟ್ಟಿದ್ದರೂ ಕೂಡ ಅವರು 10ನೇ ತಾರೀಖಿನಿಂದ 15ನೇ ತಾರೀಖಿನೊಳಗೆ ಒಂದು ಜಂಟಿ ಸಭೆಯನ್ನು ಕರೆಯುತ್ತೇನೆಂದು ಹೇಳಿದ್ದರು. ಇದರ ಬಗ್ಗೆ ನಾವು ಐದಾರು ಸಾರಿ ರೆಮೈಂಡ್ ಮಾಡಿದರೂ ಕೂಡ ನಮಗೆ ಏನು ಪ್ರತಿಕ್ರಿಯೆ ನೀಡುತ್ತಿಲ್ಲ. ನಾನು ಒಬ್ಬ ಶಾಸಕನಾಗಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಕೇಳಿದರೂ ಕೂಡ ಗಮನಿಸುವುದಿಲ್ಲವೆಂದರೆ ನಾವು ಏನು ಮಾಡಬೇಕು? ಇದಕ್ಕಿಂತ ಗಂಭೀರವಾಗಿ ಅವರ ಗಮನ ಸೆಳೆಯುವುದಕ್ಕೆ ಏನು ಮಾಡಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ, ನಾವು ಈಗ ಧರಣಿ ಮಾಡತಕ್ಕಂಥದ್ದು ಅನಿವಾರ್ಯವಾಗಿದೆ. ಈಗ ನಾವು ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಶ್ರೀ ಸಿ.ಟಿ.ರವಿ ಮತ್ತು ಶ್ರೀ ಡಿ.ಎನ್.ಜೀವರಾಜ್ ಹಾಗು ಶ್ರೀ ಎಂ.ಪಿ. ಕುಮಾರಸ್ವಾಮಿರವರು ಸದನದ ಬಾವಿಗೆ ಬಂದರು)

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಮುಖ್ಯಮಂತ್ರಿಯವರೆ, ತಾವು ಬೆಳಿಗ್ಗೆ ಇರಲಿಲ್ಲ. ಆ ಸಂದರ್ಭದಲ್ಲಿ ಸಭಾಧ್ಯಕ್ಷರು ಇದ್ದಾಗ ಈ ವಿಷಯವನ್ನು ಅವರು ಪ್ರಸ್ತಾಪ ಮಾಡಿದ್ದರು. ಮಾನ್ಯ ಸಿ.ಟಿ.ರವಿಯವರು 28ನೇ ತಾರೀಖಿನಿಂದ ಒಟ್ಟು 10 ದಿವಸಗಳ ಕಾಲ ಪಾದಯಾತ್ರೆಯನ್ನು ಕೈಗೊಂಡಿದ್ದರು. ಚಿಕ್ಕಮಗಳೂರು ಜಿಲ್ಲೆಯಲ್ಲಿ 5 ಲಿಫ್ಟ್ ಇರಿಗೇಶನ್ ಆಗಬೇಕೆಂದು ಮತ್ತು ಅಲ್ಲಿ ನಕ್ಸಲೈಟ್ ಚಳವಳಿ ಜಾಸ್ತಿಯಾಗಿರುವಂಥ ಈ ಸಂದರ್ಭದಲ್ಲಿ ಅರಣ್ಯ ಒತ್ತುವರಿ ಮಾಡಿಕೊಂಡಿರತಕ್ಕಂಥ ಜಮೀನುಗಳಿಗೆ ಸಂಬಂಧಪಟ್ಟಂತೆ ಒಂದು ಪರಿಹಾರ ಹುಡುಕಬೇಕು ಹಾಗೆಯೇ ತಾವೇನು ಅಲ್ಲಿಗೆ ಪ್ಯಾಕೇಜ್ ಘೋಷಣೆ ಮಾಡಿದ್ದೀರಿ. ಅದರ ಮೂಲಕ ಅಲ್ಲಿ ಅನುಕೂಲತೆಗಳು ಆಗಬೇಕೆಂದು ಅಲ್ಲಿನ ಸಾಮಾನ್ಯ ಜನಗಳಿಗೆ ಸಂಬಂಧಪಟ್ಟಂಥ ವಿಷಯವನ್ನು ಅವರು ಪ್ರಸ್ತಾಪ ಮಾಡಿದ್ದರು. ಇದಕ್ಕೆ ಸಂಬಂಧಪಟ್ಟಂತೆ ತಾವು ಒಂದು ಸಭೆ ಕರೆದು ಇದಕ್ಕೊಂದು ಪರಿಹಾರ ಹುಡುಕುತ್ತೇವೆಂಬ ಭರವಸೆಯನ್ನು ಸಹ ಕೊಟ್ಟೀದ್ದೀರಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೆ, ಈ ಸಂದರ್ಭದಲ್ಲಿ ನನ್ನ ವಿನಂತಿ ಏನೆಂದರೆ, ಪ್ರತಿಯೊಂದು ಹಂತದಲ್ಲಿಯೂ ಕೂಡ ಸದನದ ವೆಲ್‌ಗೆ ಬರತಕ್ಕಂಥ ಪದ್ಧತಿ ಸರಿಯಿಲ್ಲ. ಮಾನ್ಯ ಸದಸ್ಯರು ಈಗಾಗಲೇ ಬಂದು ನನಗೆ ಮನವಿ ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಸಭೆ ಮಾಡುವುದಕ್ಕೋಸ್ಕರ ಅಂದರೆ, ದಿನಾಂಕ 25ನೇ ತಾರೀಖು ಸೋಮವಾರ ಬೆಳಿಗ್ಗೆ 9.30 ಗಂಟೆಗೆ ಸಭೆ ಕರೆಯುವುದಕ್ಕೆ ದಿನ ನಿಗದಿ ಮಾಡಿ ಈಗಾಗಲೇ ಸಂಬಂಧಪಟ್ಟವರಿಗೆ ಪತ್ರವನ್ನು ಕೂಡ ಕಳುಹಿಸಿಕೊಟ್ಟಿದ್ದೇವೆ. ನೀವು ಈಗ ವೆಲ್‌ನಲ್ಲಿ

ಕುಳಿತುಕೊಂಡಿದ್ದೀರೆಂದು ನಾನು ಈ ಮಾತನ್ನು ಹೇಳುತ್ತಿಲ್ಲ. ನಿಮಗೆ ಈಗಾಗಲೇ ನಾನು ಏನು ಆಶ್ವಾಸನೆ ಕೊಟ್ಟಿದ್ದೇನೆಯೋ ಆ ಪ್ರಕಾರ ಸಭೆ ಕರೆಯಲಾಗಿದೆ. ಮತ್ತೆ ಗಿರಿಜನರ ಬಗ್ಗೆ ಮತ್ತು ಮೀನುಗಾರರ ಸಮಸ್ಯೆ ಬಗ್ಗೆ ಮಾತನಾಡಬೇಕೆಂದು ಮಾನ್ಯ ವಿಶ್ವೇಶ್ವರ ಹೆಗಡೆಯವರು ಕೂಡ ಮನವಿ ಮಾಡಿಕೊಂಡಿದ್ದಾರೆ. ಆದ್ದರಿಂದ, ಈ ವಿಷಯವಕ್ಕೆ ಸಂಬಂಧಪಟ್ಟಂಥ ಸಭೆಯನ್ನು ಮಂಗಳವಾರದ ದಿವಸ ಕರೆಯಲಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಸಿ.ಟಿ.ರವಿಯವರು ವಿಶೇಷವಾಗಿ ಪಾದಯಾತ್ರೆ ಮಾಡಿ ಈ ರಾಜ್ಯದ ಗಮನವನ್ನು ಸೆಳೆದಿದ್ದಾರೆ.

ಶ್ರೀ ಧರ್ಮಸಿಂಗ್:– ಇವತ್ತು ಕಳಸ ಬಂಡೂರಿ ನಾಲೆ ಬಗ್ಗೆ ಸಭೆ ಕರೆಯಲಾಗಿತ್ತು. ಮಾನ್ಯ ಸಿ.ಟಿ.ರವಿರವರು ನೀಡಿರತಕ್ಕಂಥ ಮನವಿ ಬಗ್ಗೆ ಚರ್ಚೆ ಮಾಡಲು 25ನೇ ತಾರೀಖು ಬೆಳಿಗ್ಗೆ 9.30 ಗಂಟೆಗೆ ಕೃಷ್ಣ ಗೃಹ ಕಚೇರಿಯಲ್ಲಿ ಸಭೆ ಕರೆಯಲಾಗಿದೆ. ಸಭೆ ಕರೆಯುವ ಬಗ್ಗೆ ಈಗಾಗಲೇ ಪತ್ರ ಕೂಡ ಬರೆಯಲಾಗಿದೆ. ಇದರ ಬಗ್ಗೆ ಖಂಡಿತ ಚರ್ಚೆ ಮಾಡುತ್ತೇವೆ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಶ್ರೀ ಸಿ.ಟಿ.ರವಿ ಮತ್ತು ಶ್ರೀ ಡಿ.ಎನ್.ಜೀವರಾಜ್ ಹಾಗು ಶ್ರೀ ಎಂ.ಪಿ.ಕುಮಾರಸ್ವಾಮಿಯವರು ತಮ್ಮ ಸ್ಥಾನಗಳಿಗೆ ಮರಳಿದರು)

ಉಪಾಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾಗುವ ಉತ್ತರಗಳು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 5432
ಸದಸ್ಯರ ಹೆಸರು : ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಆಲಮಟ್ಟಿ ಜಲಾಶಯವು ದಿ.ಲಾಲ್‌ಬಹದ್ದೂರ್ ಶಾಸ್ತ್ರಿಯವರ ಅವಧಿಯಲ್ಲಿ ಪ್ರಾರಂಭವಾಯಿತೇ?	ಹೌದು. ದಿ.ಲಾಲ್ ಬಹದ್ದೂರ್ ಶಾಸ್ತ್ರಿಯವರು ದಿನಾಂಕ: 22.5.1964ರಂದು ಆಲಮಟ್ಟಿ ಅಣೆಕಟ್ಟಿನ ಶಂಕುಸ್ಥಾಪನೆಯನ್ನು ನೆರವೇರಿಸಿರುತ್ತಾರೆ.
ಆ.	ಇಲ್ಲದಿದ್ದಲ್ಲಿ, ಯಾವಾಗ ಪ್ರಾರಂಭವಾಯಿತು.	